ಸಾಕ್ಷಿದಾರರಿಗೆ ಇಂದು ದಿನಾಂಕಃ 26-03-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ 5 ರಿಂದ 9 ನೇ ಆರೋಪಿತರ ಪರ ಶ್ರೀಮತಿ ಎ.ಎಸ್.ಎಸ್.(ಭಟ್ಟ) ವಕೀಲರಿಂದಃ**

ಆರೋಪಿತರನ್ನು ನೀವು ಶಾಲೆಯಲ್ಲಿ ಸೇರಿಸಿಕೊಳ್ಳದೇ ಇರುವುದರಿಂದ ಬಿ.ಇ.ಓ. ರವರು ದಿಃ 05-08-2010 ರಂದು ನಿಮಗೆ ಕಾರಣ ಕೇಳಿ ನೋಟಿಸನ್ನು ಜ್ಯಾರಿಗೊಳಿಸಿದ್ದರು ಎಂದರೆ ನಿಜ. ಸದ್ರಿ ನೋಟಿಸಿಗೆ ನೀವು ಯಾವುದೇ ಉತ್ತರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡರವರು ನಿಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುವ ಶಿಕ್ಷಕರನ್ನು ಅನಧಿಕೃತವಾಗಿ ಹೊರಗೆ ಹಾಕಿದವರನ್ನು ಮತ್ತೇ ಕರೆದು ಅವರನ್ನು ಪಾಠ ಮಾಡಲು ಅವಕಾಶ ಕೊಡಬೇಕೆಂದು ಮತ್ತು ಅವರಿಗೆ ವೇತನ ಕೊಡಬೇಕೆಂದು ದಿಃ 21-08-2010 ರಂದು ಕಾರಣ ಕೇಳಿ ನೋಟಿಸನ್ನು ಜ್ಯಾರಿಗೊಳಿಸಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ಅನುದಾನಿತ ಶಿಕ್ಷಕರನ್ನು ಹೊರಗಿಟ್ಟು ಅನಧಿಕೃತವಾಗಿ ಬೇರೆಯವರನ್ನು ಕರೆದು ಪಾಠ ಮಾಡುತ್ತಿದ್ದ ಶಿಕ್ಷಕರನ್ನು ಹೊರಗೆ ಹಾಕಬೇಕೆಂದು ಕಾರಣ ಕೇಳಿ ನೋಟಿಸನ್ನು ಜ್ಯಾರಿಗೊಳಿಸಿದ್ದರು ಎಂದರೆ ಸರಿಯಲ್ಲ. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡರವರು ಪುನಃ 2 ನೇ ಬಾರಿಗೆ ದಿಃ 30-09-2010 ರಂದು 10 ದಿನಗಳ ಕಾಲಾವಕಾಶ ಕೊಟ್ಟು ಕಾರಣ ಕೇಳಿ ನೋಟಿಸನ್ನು ಜ್ಯಾರಿಗೊಳಿಸಿದ್ದರು ಎಂದರೆ ನಿಜ. ನೀವು ಯಾವುದೇ ಆದೇಶಗಳನ್ನು ಪಾಲಿಸದೇ ಇದ್ದುದರಿಂದ ದಿಃ 04-11-2010 ರಂದು ಬಿ.ಇ.ಓ. ಮುಂಡಗೋಡರವರನ್ನು ವಿಶೇಷ ಅಧಿಕಾರಿಯಾಗಿ ನೇಮಕ ಮಾಡಲಾಯಿತು ಎಂದರೆ ನಿಜ. ಆ ರೀತಿ ಆದೇಶವನ್ನು ಪ್ರಶ್ನಿಸಿ ನಾವು ಗೌರವಾನ್ವಿತ ಉಚ್ಛ ನ್ಯಾಯಾಲಯದಲ್ಲಿ ಯಾವುದೇ ರಿಟ್ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನೀವು ಹಾಕಿದ ರಿಟ್ ಅರ್ಜಿಯು ದಿಃ 22-11-2011 ರಂದು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ನೀವು ದಾಖಲಿಸಿದ ರಿಟ್ ಅರ್ಜಿ ಸಂಖ್ಯೆ 68241/2010 ಆಗಿರುತ್ತದೆ ಎಂದರೆ ಸಾಕ್ಷಿಯು ರಿಟ್ ಅರ್ಜಿಯನ್ನು ವಿಶೇಷ ಅಧಿಕಾರಿಗಳು ಹಾಕಿದ್ದರಿಂದ ನಾವು ಸಂಸ್ಥೆಯನ್ನು ಹಸ್ತಾಂತರಗೊಳಿಸಿರುತ್ತೇವೆ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಕುಮಾರಿ ಶಿಲ್ಪಾ ಬಿದ್ದಪ್ಪ ಹರಿಜನ, ನಿರ್ಮಲಾ ದ್ಯಾಮಣ್ಣ ಹರಿಜನ ಹಾಗೂ ನಾಗವ್ವ ನಾಗಪ್ಪ ವಾಲ್ಮೀಕಿ ಯವರ ಹಾಲ್ ಟಿಕೇಟುಗಳನ್ನು ತೋರಿಸಿದ್ದು ಸಾಕ್ಷಿಯು ಸದ್ರಿಯವುಗಳನ್ನು ನೋಡಿ ಗುರುತಿಸಿ, ಅವುಗಳ ಮೇಲೆ ಇರುವ ಸಹಿಗಳು ತನ್ನದೇ ಎಂದು ನೋಡಿ ಗುರುತಿಸಿದ್ದು ಸದ್ರಿಯವುಗಳನ್ನು ನಿಡಿ 1 ರಿಂದ 3 ಎಂದು ಗುರುತಿಸಿ, ಅವುಗಳಲ್ಲಿರುವ ಸಹಿಗಳನ್ನು ನಿಡಿ 1(ಎ) ದಿಂದ ನಿಡಿ 3(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ದಿಃ 05-05-2008 ರ ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ ಇವರಿಗೆ ಬರೆದ ಪತ್ರವನ್ನು ತೋರಿಸಿದ್ದು ಸಾಕ್ಷಿಯು ಸದ್ರಿಯದನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ 4 ಎಂದು, ಸಾಕ್ಷಿಯ ಸಹಿಯನ್ನು ನಿಡಿ 4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 29-05-2007 ರಂದು ಸನ್ಮಾನ್ಯ ಪದ್ಮಶ್ರೀ ಡಾಃ ಸುಧಾ ಮೂರ್ತಿಯವರಿಗೆ ಬರೆದ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ 5 ಎಂದು, ಸಾಕ್ಷಿಯ ಸಹಿಯನ್ನು ನಿಡಿ5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 04-01-2010 ರ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ 6 ಎಂದು, ಸಾಕ್ಷಿಯ ಸಹಿಯನ್ನು ನಿಡಿ 6(ಎ) ಎಂದು ಗುರುತಿಸಲಾಯಿತು. ನಿಮ್ಮ ಶಿಕ್ಷಣ ಸಂಸ್ಥೆಯಲ್ಲಿ ಇರುವ ಆರೋಪಿತ ಶಿಕ್ಷಕರು ಸಂಸ್ಥೆಯಲ್ಲಿ ನಡೆಯುವ ಅವ್ಯವಹಾರಗಳ ಬಗ್ಗೆ ಮಾನ್ಯ ಉಪ ನಿರ್ದೇಶಕರು, ಶಿಕ್ಷಣ ಇಲಾಖೆ, ಶಿರಸಿ ರವರಿಗೆ ಒಂದು ಪತ್ರವನ್ನು ಬರೆದಿದ್ದರು ಎಂದರೆ ನಿಜ. ನೀವು ಅನುದಾನಿತ ಶಿಕ್ಷಕರಿಗೆ ಬರುವ ಸಂಬಳದ ಪ್ರತಿಶತ 30 ರಷ್ಟನ್ನು

ನಿಮಗೆ ಕೊಡಬೇಕೆಂದು ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ. ನೀವು ನಿಮಗೆ ಹಣ ಕೊಡುವ ಶಿಕ್ಷಕರ ಹಾಗೂ ಕೊಡದೇ ಇರುವ ಶಿಕ್ಷಕರ ಎರಡು ಹಾಜರಾತಿ ಪುಸ್ತಕಗಳನ್ನು ಇರಿಸಿಕೊಂಡಿದ್ದಿರಿ ಎಂದರೆ ಸರಿಯಲ್ಲ. ಸದ್ರಿ ಶಿಕ್ಷಕರಿಗೆ ನೀವು ಹೇಳಿದ ಹಾಗೆ ಕೇಳದೇ ಇದ್ದಾಗ ಅವರನ್ನು ಅಮಾನತ್ತುಗೊಳಿಸಲಾಗಿದೆ ಎಂದು ಶಿಕ್ಷಣ ಕಾನೂನಿಗೆ ವಿರುದ್ಧವಾಗಿ ಪತ್ರಗಳನ್ನು ಕೊಡುತ್ತಿದ್ದಿರಿ ಎಂದರೆ ಸರಿಯಲ್ಲ. ನೀವು ನಿಮ್ಮ ಸಂಸ್ಥೆಯ ಕಾರ್ಯದರ್ಶಿ ಇದ್ದಾಗಲೂ ಸಹ ಮುಖ್ಯೋಪಾಧ್ಯಾಯರ ಮೊಹರನ್ನು ಹಾಕಿ ಅದಕ್ಕೆ ಸಹಿಗಳನ್ನು ಹಾಕುತ್ತಿದ್ದಿರಿ ಎಂದರೆ ಸರಿಯಲ್ಲ. ನಿಡಿ 1 ರಿಂದ 6 ನೇದ್ದವುಗಳಿಗೆ ಮುಖ್ಯೋಪಾಧ್ಯಾಯರ ಮೊಹರನ್ನು ಹಾಕಿ ಸಹಿಗಳನ್ನು ಹಾಕಿರುತ್ತಿರಿ ಎಂದರೆ ಸಾಕ್ಷಿಯು ಅದು 2007 ಮತ್ತು 2008 ನೇ ಇಸ್ವಿಯಲ್ಲಿ ಹಾಕಿದ ಮೊಹರು ಮತ್ತು ಸಹಿ ಆಗಿದ್ದು, ಅವುಗಳು ಅನುದಾನಿತ ಆಗುವುದಕ್ಕಿಂತ ಮುಂಚೆ ಹಾಕಿದ್ದವುಗಳಾಗಿರುತ್ತವೆ ಎಂದು ನುಡಿದಿರುತ್ತಾರೆ. ನಮ್ಮ ಸಂಸ್ಥೆಯು 2009 ರಲ್ಲಿ ಅನುದಾನಿತವಾಗಿರುತ್ತದೆ. ಅದಾದ ನಂತರ ನಾನು ಯಾವುದೇ ಸಹಿಗಳನ್ನು ಹಾಕಿರುವುದಿಲ್ಲ. ನಿಡಿ 6 ರಲ್ಲಿ ನೀವು 2009 ರ ನಂತರ ಸಹಿಯನ್ನು ಹಾಕಿರುತ್ತೀರಿ ಎಂದು ತೋರಿಸುತ್ತದೆ ಎಂದರೆ ಸರಿಯಲ್ಲ. ನಿಮ್ಮ ಶಾಲೆಯ ಅನುಮತಿ ಪತ್ರವನ್ನು ಶಿಕ್ಷಣ ಇಲಾಖೆಯವರು ರದ್ದುಗೊಳಿಸಿರುತ್ತಾರೆ ಎಂದರೆ ಸಾಕ್ಷಿಯು ದಿಃ 28-12-2015 ರಂದು ರದ್ದುಗೊಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಅದಕ್ಕಿಂತ ಮುಂಚೆ ದಿಃ 21-10-2014 ರಂದು ಆರೋಪಿತರ ಶಿಕ್ಷಕರುಗಳನ್ನು ಶಿಕ್ಷಣ ಇಲಾಖೆಯವರು ಶಿಕ್ಷಕರನ್ನು ಮತ್ತು ಶಿಕ್ಷಕೇತರ ಸಿಬ್ಬಂದಿಗಳನ್ನು ಬೇರೆ ಬೇರೆ ಶಾಲೆಗಳಲ್ಲಿ ನೇಮಕಾತಿ ಆದೇಶವನ್ನು ಹೊರಡಿಸಿರುತ್ತಾರೆ ಎಂದರೆ ನಿಜ. ಆದರೆ ದಿಃ 04-11-2010 ರಿಂದ 2014 ರವರೆಗೆ ತಹಶೀಲ್ದಾರರವರು ಆಡಳಿತ ಅಧಿಕಾರಿಯಾಗಿ ನೇಮಕವಾಗಿದ್ದರು ಎಂದು ನುಡಿದಿರುತ್ತಾರೆ. ಆರೋಪಿತರ ಶಿಕ್ಷಕರು ಯಾವುದೇ ತಪ್ಪನ್ನು ಎಸಗದೇ ಇದ್ದ ಕಾರಣದಿಂದ ಬೇರೆ ಬೇರೆ ಶಿಕ್ಷಣ ಸಂಸ್ಥೆಗಳಲ್ಲಿ ಅವರನ್ನು ನೇಮಕ ಮಾಡಲಾಗಿತ್ತು ಎಂದರೆ ಸರಿಯಲ್ಲ. ಆರೋಪಿತ ಶಿಕ್ಷಕರು ಮತ್ತು ಶಿಕ್ಷಕೇತರ ಸಿಬ್ಬಂದಿಯವರು ಬೇರೆ ಶಾಲೆಗಳಲ್ಲಿ ನೇಮಕಾತಿ ಮಾಡಿರುವುದನ್ನು ಹಾಗೂ ಅವರು ಎರಡೆರಡು ಹಾಜರಾತಿ ಪುಸ್ತಕಗಳನ್ನು ನಿರ್ವಹಿಸಿದ ಕಾರಣಕ್ಕಾಗಿ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸುವುದಕ್ಕಾಗಿ ಮಾನ್ಯ ಆಯುಕ್ತರು, ಶಿಕ್ಷಣ ಇಲಾಖೆ ಧಾರವಾಡ ರವರಲ್ಲಿ ಮೇಲ್ಮನವಿಯನ್ನು ದಾಖಲಿಸಿದ್ದರು ಎಂದರೆ ನಿಜ. ಆದರೆ ಆ ಸಮಯದಲ್ಲಿ ಪ್ರಕರಣವು ಇದೇ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿತ್ತು ಎಂದು ನುಡಿದಿರುತ್ತಾರೆ. ನೀವು ದಾಖಲಿಸಿದ ಮೇಲ್ಮನವಿಯನ್ನು ವಜಾ ಮಾಡಿರುತ್ತಾರೆ ಎಂದರೆ ನಿಜ. ಆ ಸಮಯದಲ್ಲಿ ನಿಮ್ಮ ಶಾಲೆಯ ಅನುಮತಿ ಪತ್ರ ರದ್ದಾಗಿರುತ್ತದೆ ಎಂದರೆ ಸಾಕ್ಷಿಯು 2015 ರಲ್ಲಿ ರದ್ದಾಗಿರುತ್ತದೆ ಎಂದು ನುಡಿದಿರುತ್ತಾರೆ. ಎಲ್ಲಾ ಶಿಕ್ಷಣ ಇಲಾಖೆಯವರು ನೀವು ಮಾಡಿದ ತಪ್ಪುಗಳು ಹೊರಬರಲು ಆರೋಪಿತ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿಗಳೇ ಕಾರಣ ಎಂದು ತಿಳಿದು ಅವರುಗಳ ವಿರುದ್ಧ ಖಾಸಗಿ ಫಿರ್ಯಾದನ್ನು ಈ ನ್ಯಾಯಾಲಯದಲ್ಲಿ ದಾಖಲಿಸಿರುತ್ತಿರಿ ಎಂದರೆ ನಿಜ. ನೀವು ದಾಖಲೆಗಳನ್ನು ಸೃಷ್ಟಿಸುವ ಕೆಲಸಗಳನ್ನು ಮೊದಲಿನಿಂದಲೂ ಮಾಡುತ್ತಾ ಬಂದಿರುತ್ತಿರಿ ಎಂದರೆ ಸರಿಯಲ್ಲ. ಆ ಕಾರಣದಿಂದ ರೇಲ್ವೆ ಇಲಾಖೆಯವರು ನಿಮ್ಮ ಕೆಲಸದಿಂದ ವಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನೀವು ವಿಜಯ ಸಂಕೇಶ್ವರರವರ ಮೊಹರು ಹಾಗೂ ಲೆಟರ್ ಪ್ಯಾಡ್ ನ್ನು ಉಪಯೋಗಿಸಿಕೊಂಡು ದಾಖಲಾತಿಯನ್ನು ಸೃಷ್ಟಿಸಿರುತ್ತಿರಿ ಎಂದು ನಿಮ್ಮನ್ನು ವಜಾಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ಹಾಜರಾತಿ ಪುಸ್ತಕಗಳನ್ನು ನೀವೇ ಕಾರ್ಯದರ್ಶಿಗಳಾಗಿ ಸೃಷ್ಟಿಸಿರುತ್ತಿರಿ ಎಂದರೆ ಸರಿಯಲ್ಲ. ಸದ್ರಿ ಹಾಜರಾತಿ ಪುಸ್ತಕಗಳನ್ನು ರದ್ದುಗೊಳಿಸಬೇಕೆಂದು ನೀವೇ ಪತ್ರವನ್ನು ಬರೆದಿರುತ್ತಿರಿ ಎಂದರೆ ಸಾಕ್ಷಿಯು ಸಿಬ್ಬಂದಿಯವರೇ ಹಾಜರಾತಿ ಪುಸ್ತಕಗಳನ್ನು ನಿರ್ವಹಣೆ ಮಾಡುತ್ತಿದ್ದರು ಎಂದು ನುಡಿದಿರುತ್ತಾರೆ. ನಿಮ್ಮ ಶ್ರೀಮತಿಯವರು ಸರಕಾರಿ ಶಾಲೆಯಲ್ಲಿ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾಗಲೂ ನಿಮ್ಮ ಸಂಸ್ಥೆಯಲ್ಲಿ ಹಾನರೇಬಲ್ ಸೆಕ್ರೇಟರಿ (ಗೌರವ ಕಾರ್ಯದರ್ಶಿ) ಆಗಿ ಕಾರ್ಯ ನಿರ್ವಹಿಸುತ್ತಿದ್ದರಿಂದ ಅವರನ್ನು ಅಮಾನತಗೊಳಿಸಲಾಗಿತ್ತು ಎಂದರೆ ಸಾಕ್ಷಿಯು ಅದು 2008 ಕ್ಕಿಂತ ಮುಂಚೆ ಆಗಿರುತ್ತದೆ ಎಂದು ನುಡಿದಿರುತ್ತಾರೆ.

**ಮುಂದುವರೆದ  ಪಾಟೀ ಸವಾಲಿಗೆ  ವಕೀಲರು ಕಾಲಾವಕಾಶ ಕೇಳಿದ್ದು ಕಲ್ಪಿಸಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ .ಹೇ.ಕೇ. ಸರಿ ಇದೆ

Sd/-

ಪ್ರ.ದ.ನ್ಯಾ.ದಂ. ಮುಂಡಗೋಡ.